**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಆರ್.ಎ.ಸಂಖ್ಯೆ: 25/2013 ಜೊತೆಗೆ 34/2013**

ದಿನಾಂಕ: 07.03.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ವಾ.ಸಾ. - 1

**ಮುಂದುವರೆದ ಪಾಟೀ ಸವಾಲು: ಎದುರುದಾರರ ಸಂಖ್ಯೆ 3 ರಿಂದ 6 ರವರ ಪರ ಶ್ರೀ. ಎಸ್.ಎನ್ ವಕೀಲರಿಂದ:**

ಸಾಕ್ಷಿಗೆ ಶಪಥ ಪತ್ರದ ವಾಕ್ಯ ವೃಂದ -7 ರಲ್ಲಿ ಬರೆದಿರುವುದು ಸ್ವತಃ ತಿಳುವಳಿಕೆಯಿಂದ ಬರೆಸಿರುತ್ತೀರ ಎಂದು ಕೇಳಿದ್ದು ನಮ್ಮ ವಕೀಲರ ಕಡೆಯಿಂದ ಹಾಕಿರುವುದು ಎಂದು ಉತ್ತರಿಸುತ್ತಿದ್ದಾರೆ. ನನ್ನ ಕ್ರಯ ಪತ್ರದಲ್ಲಿ ಬರೆಸಿರುವುದು ನಾನು ನೀಡಿದ ಮಾಹಿತಿ ಮೇರೆಗೆ. ನನ್ನ ಕ್ರಯ ಪತ್ರದಲ್ಲಿ ಶಪಥ ಪತ್ರದ ವಾಕ್ಯ ವೃಂದ -7 ರಲ್ಲಿ ಬರೆಸಿರುವುದನ್ನು

ಬರೆಸಿರುತ್ತೇನೆ. ನನ್ನ ಕ್ರಯ ಪತ್ರದಲ್ಲಿ ಯಶೋದಮ್ಮನ ಕುಟುಂಬದಲ್ಲಿ ಆದ ಆಗು ಹೋಗುಗಳ ಕುರಿತು ಬರೆಸಿಲ್ಲ. ಶಪಥ ಪತ್ರದ ವಾಕ್ಯ ವೃಂದ -7 ರಲ್ಲಿ ಬರೆಸಿರುವುದನ್ನು ಕ್ರಯದ ಸಮಯಕ್ಕೆ ಯಶೋದಮ್ಮ ಹೇಳಿದ್ದರ ಮೇರೆಗೆ ಬರೆಸಿರುತ್ತದೆ. ಯಶೋದಮ್ಮ ಹೇಳಿದ್ದನ್ನು ಬರವಣಿಗೆಯಲ್ಲಿ ಪಡೆದುಕೊಂಡಿಲ್ಲ. ಕ್ರಯ ಪತ್ರ ಸಮಯಕ್ಕೆ ಕೆ ಎಸ್ ಆರ್ ಟಿ ಸಿ ಯ ವಕೀಲರು ಇದ್ದರು. ಕ್ರಯ ಪತ್ರ ಸಮಯಕ್ಕೆ ನನ್ನ ಮುಖ್ಯ ವಿಚಾರಣೆ ಶಪಥ ಪತ್ರ ತಯಾರು ಮಾಡಿದ ವಕೀಲರು ಇದ್ದರು. ಸಾಕ್ಷಿಗೆ ಅವರ ವಕೀಲರು ಪ್ರಶ್ನೆಯನ್ನು ಪುನರುಚ್ಚರಿಸಿದ್ದು ಸಾಕ್ಷಿ ಸದರಿ ವಕೀಲರು ಇರಲಿಲ್ಲ ಎಂದು ಉತ್ತರಿಸುತ್ತಿದ್ದರು.

ಶಪಥ ಪತ್ರದ ವಾಕ್ಯ ವೃಂದ -7 ರಲ್ಲಿ ನನ್ನ ಅನುಕೂಲಕ್ಕೆ ಸರಿಯಾಗುವಂತೆ ಬರೆಸಿದ್ದೇನೆ ಎನ್ನುವುದು ಸರಿ ಅಲ್ಲ. ಯಶೋದಮ್ಮನ ಕುಟುಂಬದಲ್ಲಿ ನಡೆದ ಎಲ್ಲಾ ಸಂಗತಿಗಳ ಕುರಿತು ನನಗೆ ಗೊತ್ತಿಲ್ಲ ಎನ್ನುವುದು ಸರಿ ಇದೆ. ಆದರೆ, ಅಲ್ಪ ಸ್ವಲ್ಪ ಹೇಳುತ್ತಿದ್ದರು. ಶಪಥ ಪತ್ರದ ವಾಕ್ಯ ವೃಂದ -7 ರಲ್ಲಿ ಬರೆಸಿರುವುದು ಎಲ್ಲಾ ಸುಳ್ಳು ಎನ್ನುವುದು ಸರಿ ಅಲ್ಲ. ನನಗೆ ಮಾರಾಟ ಮಾಡಿದ ಸ್ವತ್ತು ಕೇವಲ ಯಶೋದಮ್ಮನ ಸ್ವತ್ತು ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. ಯಶೋದಮ್ಮ ಮಾರಾಟ ಮಾಡಿದ ಸ್ವತ್ತು ಮತ್ತು ಉಳಿಸಿಕೊಂಡ ಸ್ವತ್ತು ಯಶೋದಮ್ಮ ಮತ್ತು ಅವರ ಮಗ ಶ್ರೀ ನಿವಾಸ ಮೂರ್ತಿಗೆ ಸೇರಿದ ಜಂಟಿ ಸ್ವತ್ತು ಎನ್ನುವುದು ಸರಿ ಇದೆ. ಯಶೋದಮ್ಮ ಸ್ವತ್ತು ಮಾರಾಟ ಮಾಡಿದ

ಸಮಯಕ್ಕೆ ಸ್ವತ್ತಿನ ಅರ್ಧ ಭಾಗ ಯಶೋದಮ್ಮನದು ಎಂದು ತೀರ್ಮಾನ ಆಗಿರಲಿಲ್ಲ ಎನ್ನುವುದು ಸರಿ ಅಲ್ಲ.

ಯಶೋದಮ್ಮನಿಗೆ ಅರ್ಧ ಭಾಗ ಸ್ವತ್ತು ಎಂದು ತೀರ್ಮಾನ ಆಗಿರದ ಕಾರಣ ಮತ್ತು ಸ್ವತ್ತು ಯಶೋದಮ್ಮನ ಮತ್ತು ಶ್ರೀನಿವಾಸ ಮೂರ್ತಿಯ ಜಂಟಿ ಸ್ವತ್ತು ಆಗಿರುವುದರಿಂದ ಭಾಗ ಕೊಡಬೇಕಾಗುತ್ತದೆ ಎನ್ನುವುದು ಸರಿ ಅಲ್ಲ. ಕೆ ಎಸ್ ಎಫ್ ಸಿ ಇಂದ ಯಾರು, ಯಾವಾಗ ಮತ್ತು ಎಷ್ಟು ಹಣ ಸಾಲ ತೆಗೆದುಕೊಂಡಿದ್ದರು ಎಂದು ವಿವರ ನನಗೆ ಗೊತ್ತಿಲ್ಲ. ಸದರಿ ಸಾಲವನ್ನು ಶೇಕಡ 80 ಭಾಗ ಯಶೋದಮ್ಮ ಮತ್ತು ಶ್ರೀನಿವಾಸ ಮೂರ್ತಿ ಮತ್ತು ಶೇಕಡ 20, 1 ನೇ ಪ್ರತಿವಾದಿ ತೀರಿಸಿದ್ದರು ಎಂದು ಯಶೋದಮ್ಮ ಹೇಳಿದ್ದರು. ಈ ಕುರಿತು ನನ್ನ ಕ್ರಯಪತ್ರದಲ್ಲಿ ತೋರಿಸಿಲ್ಲ ಮತ್ತು ಯಶೋದಮ್ಮನಿಂದ ಬರವಣಿಗೆಯಲ್ಲಿ ಪಡೆದಿಲ್ಲ. ನಾನು ಹೇಳುತ್ತಿರುವಂತೆ ಶೇಕಡ 20 ಸಾಲ ಮರುಪಾವತಿ 1 ನೇ ಪ್ರತಿವಾದಿ ಮಾಡಿರುವುದಿಲ್ಲ, ನಾನು ಮತ್ತು 1 ನೇ ಪ್ರತಿವಾದಿ ಪರಸ್ಪರ ಸಹಾಯ ಮಾಡಿಕೊಳ್ಳಲು ಈ ರೀತಿ ಸುಳ್ಳು ಹೇಳುತ್ತಿದ್ದೇವೆ ಎನ್ನುವುದು ಸರಿ ಅಲ್ಲ. 1 ನೇ ಪ್ರತಿವಾದಿ ಈ ದಾವೆಯಲ್ಲಿ ಮತ್ತು ಇತರೆ ಯಾವುದೇ ವ್ಯವಹರಣೆಯಲ್ಲಿ ಕೆ ಎಸ್ ಎಫ್ ಸಿ ಸಾಲ ಶೇಕಡ 20 ಮರುಪಾವತಿ ಮಾಡಿದ ಬಗ್ಗೆ ಹೇಳಿರುತ್ತಾರೆ ಅಥವಾ ಇಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ಈ ದಾವೆಯಲ್ಲಿ ಮತ್ತು ಇತರೆ ಯಾವುದೇ ವ್ಯವಹರಣೆಯಲ್ಲಿ ಕೆ ಎಸ್ ಎಫ್ ಸಿ ಸಾಲ ಶೇಕಡ 20 ಮರುಪಾವತಿ

ಮಾಡಿರುವುದಾಗಿ ಹೇಳಿಲ್ಲ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಈ ವಿಷಯವನ್ನು ನಾನು ಊಹೆ ಮೇಲೆ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ. ಯಶೋದಮ್ಮನಿಗೆ ಯಾವುದೇ ಸ್ವಂತ ಆದಾಯ ಇರಲಿಲ್ಲ, ಕೆ ಎಸ್ ಎಫ್ ಸಿ ಸಾಲ ತೀರಿಸಲು ಆಕೆ ಯಾವುದೇ ಹಣ ಪಾವತಿ ಮಾಡಿಲ್ಲ ಮತ್ತು ಪೂರ್ಣ ಸಾಲವನ್ನು ಕೇವಲ ಶ್ರೀ ನಿವಾಸ ಮೂರ್ತಿ ಮತ್ತು ಆತನ ಕುಟುಂಬದವರು ತೀರಿಸಿರುತ್ತಾರೆ ಎನ್ನುವುದು ಸರಿ ಅಲ್ಲ. ಯಶೋದಮ್ಮನಿಗೆ ನನಗೆ ಮಾರಾಟ ಮಾಡಿದ ಸ್ವತ್ತು ಅವರು ಕೊಂಡು ಕೊಳ್ಳುವಾಗ ಆಗಲಿ ಅಥವಾ ಕೆ ಎಸ್ ಎಫ್ ಸಿ ಸಾಲ ತೀರಿಸುವಾಗ ಆಗಲಿ ಆಕೆಯ ತವರು ಮನೆಯವರು ಯಾವುದೇ ರೀತಿ ಸಹಾಯ ಮಾಡಿಲ್ಲ ಎನ್ನುವುದು ಸರಿ ಅಲ್ಲ. ಮೇಲೆ ಹೇಳಿದಂತೆ ಸಹಾಯ ಮಾಡಿದ ಕುರಿತು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಕೆ ಎಸ್ ಎಫ್ ಸಿ ಸಾಲ ಶೇಕಡ 20 ಮರುಪಾವತಿ ಮಾಡಿದ ಬಗ್ಗೆ 1 ನೇ ಪ್ರತಿವಾದಿಯನ್ನು ಅವಕಾಶ ಕೊಟ್ಟರೆ ವಿಚಾರಣೆ ಮಾಡಬಲ್ಲೆ.

ಯಶೋದಮ್ಮನ ಕುಟುಂಬಕ್ಕೆ ನಾನು ಅಪರಿಚಿತ ಆಗಿರುವುದರಿಂದ ಮತ್ತು ನಾನು ಕೊಂಡಿರುತ್ತೇನೆ ಎಂದು ಹೇಳುತ್ತಿರುವ ಸ್ವತ್ತು ವಾಸದ ಮನೆ ಆಗಿರುವುದರಿಂದ ಸದರಿ ಸ್ವತ್ತನ್ನು ನನ್ನ ಭಾಗಕ್ಕೆ ಕೊಡುವಂತೆ ಕೇಳಲು ಬರುವುದಿಲ್ಲ ಎನ್ನುವುದು ಸರಿ ಅಲ್ಲ. ದಿನಾಂಕ 16.04.2016 ರಂದು ಈಗ ನನಗೆ ತೋರಿಸುತ್ತಿರುವ ಮೆಮೋ ನ್ಯಾಯಾಲಯಕ್ಕೆ ನನ್ನ ವಕೀಲರು ಸಲ್ಲಿಸಿದ್ದರು ಎನ್ನುವುದು ಸರಿ ಇದೆ. ಈ ಮೆಮೋ ವನ್ನು **ನಿಶಾನೆ ಪಿ-19** ಎಂದು ಗುರುತಿಸಲಾಯಿತು.

ಮೆಮೋದಲ್ಲಿ ಬರೆದಿರುವುದಕ್ಕೆ ಬದ್ಧರಾಗಿದ್ದೀರ ಎಂದು ಪ್ರಶ್ನೆ ಕೇಳಿದ್ದು ವಾದಿ ವಕೀಲರು ನಿಂತು ಸಾಕ್ಷಿಗೆ ಮೆಮೋ ದಲ್ಲಿ ಬರೆದಿರುವುದನ್ನು ಸರಿಯಾಗಿ ಓದಿದ್ದೀರ ಎಂದು ಕೇಳಿದ್ದು ಸಾಕ್ಷಿ ಓದಿಲ್ಲ ಎಂದು ಹೇಳುತ್ತಿದ್ದಾರೆ. ಸಾಕ್ಷಿಗೆ ಪುನಃ ಮೆಮೋ ಓದಲು ಕೊಟ್ಟಿರುತ್ತದೆ. ಮೆಮೋದಲ್ಲಿ ಬರೆದಿರುವುದಕ್ಕೆ ಬದ್ಧರಾಗಿದ್ದೀರ ಎಂದು ಪುನಃ ಪ್ರಶ್ನೆ ಕೇಳಿದ್ದು ಇಲ್ಲ ಎಂದು ಸಾಕ್ಷಿ ಉತ್ತರಿಸುತ್ತಿದ್ದಾರೆ. ಮೆಮೋ ವನ್ನು ನನ್ನ ವಕೀಲರು ಹಾಕಿದ್ದು ಅದನ್ನು ಹಾಕುವುದಕ್ಕೆ ಮೊದಲು ನನ್ನನ್ನು ಕೇಳಿದ್ದರು ಅಥವಾ ಇಲ್ಲ ಎಂದು ಜ್ಞಾಪಕ ಇಲ್ಲ. ನಿಶಾನೆ ಪಿ-19 ಮೆಮೋ ಗಮನಿಸಿದರೆ ದಾವಾ ಸ್ವತ್ತನ್ನು ಕಬಳಿಸುವ ನನ್ನ ಉದ್ದೇಶ ಗೊತ್ತಾಗುತ್ತದೆ ಎನ್ನುವುದು ಸರಿ ಅಲ್ಲ.

ನಿಪಿ-19 ರ ಮೊದಲ ವಾಕ್ಯ ವೃಂದದಲ್ಲಿ ಹೇಳಿರುವ ಬೆಲೆಗೆ ಪ್ರತಿವಾದಿ 2 ರಿಂದ 5 ರವರು ಈಗ ಕೊಂಡುಕೊಳ್ಳಲು ಸಿದ್ದರಿದ್ದಾರೆ ಎಂದರೆ ನಾನು ತಯಾರಿಲ್ಲ. ನನಗೆ ವಾಸ ಮಾಡಲು ಪರ್ಯಾಯ ಇಲ್ಲದ ಕಾರಣ ಮಾರಾಟ ಮಾಡಲು ಸಿದ್ದನಿಲ್ಲ. ನಾನು ಶಾಶ್ವತ ನಿರ್ಬಂಧಕಾಜ್ಞೆ ದಾವೆ ಹೂಡಿದಾಗಿನಿಂದಲೂ ಬೇರೆ ಕಡೆ ಬಾಡಿಗೆ ಮನೆಯಲ್ಲಿ ವಾಸ ಇದ್ದೇನೆ. ಸ್ವಲ್ಪ ದಿನ ದಾವಾ ಮನೆಯಲ್ಲಿ ಇದ್ದೆ. ನಾನು ಯಾವುದೇ ಸಮಯದಲ್ಲೂ ದಾವಾ ಮನೆಯಲ್ಲಿ ಇರಲೇ ಇಲ್ಲ ಎನ್ನುವುದು ಸರಿ ಅಲ್ಲ. ದಾವಾ ಅನುಸೂಚಿ ಬಿ ಸ್ವತ್ತು ದಾವೆ ಹಾಕಿದಾಗ ಮಾರುಕಟ್ಟೆ ಮೌಲ್ಯ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಮಾರುಕಟ್ಟೆ ಮೌಲ್ಯ ಗೊತ್ತಿದ್ದರು ಉದ್ದೇಶ ಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ

ಎನ್ನುವುದು ಸರಿ ಅಲ್ಲ. ದಾವಾ ಅನುಸೂಚಿ ಬಿ ಸ್ವತ್ತಿನ ಮಾರುಕಟ್ಟೆ ಮೌಲ್ಯ ಸರಿಯಾಗಿ ಲೆಕ್ಕ ಹಾಕದೆ ಮತ್ತು ಸರಿಯಾದ ನ್ಯಾಯಾಲಯ ಶುಲ್ಕ ನೀಡದ ಕಾರಣ ದಾವೆ ವಜಾ ಆಗತಕ್ಕದ್ದು ಎನ್ನುವುದು ಸರಿ ಅಲ್ಲ. ಪ್ರತಿವಾದಿಗಳು ಪ್ರತಿವಾದ ಪತ್ರ ತಿದ್ದು ಪಡಿ ಮಾಡಿದ ನಂತರ ನಾನು ಅದಕ್ಕೆ ನನ್ನ ಹೆಚ್ಚುವರಿ ವಾದ ಪತ್ರ ಸಲ್ಲಿಸಿಲ್ಲ.

ದಾವಾ ಅನುಸೂಚಿ ಎ ಸ್ವತ್ತಿನಲ್ಲಿ ನಾನು ಭಾಗ ಕೇಳಿದ್ದು ಅದಕ್ಕೆ ಅರ್ಹ ಅಲ್ಲ ಎನ್ನುವುದು ನನಗೆ ಗೊತ್ತಾಗುವುದಿಲ್ಲ. ದಾವಾ ಅನುಸೂಚಿ ಎ ಸ್ವತ್ತಿನಲ್ಲಿ ಭಾಗ ಕೇಳಲು ಮತ್ತು ಕೊಟ್ಟಿದ್ದಾರೆ ಆ ರೀತಿ ಕೊಡಲು ಅರ್ಹ ಅಲ್ಲ ಎನ್ನುವುದು ಸರಿ ಅಲ್ಲ. ಮೇಲೆ ಸೂಚಿಸಿದಂತೆ ಆದೇಶ ಆಗಿರುವುದರ ಕುರಿತು ನನಗೆ ಗೊತ್ತಿಲ್ಲ. ಡಿಕ್ರಿ ಮೇಲೆ ಅಂತಿಮ ಡಿಕ್ರಿ ಅರ್ಜಿ ಸಲ್ಲಿಸಿದ್ದೇನೆ. ಅಂತಿಮ ಡಿಕ್ರಿ ಅರ್ಜಿಯಲ್ಲಿ ಪೂರ್ಣ ದಾವಾ ಅನುಸೂಚಿ ಎ ಸ್ವತ್ತು ಕುರಿತು ಕೇಳಿದ್ದೇನೆ ಎನ್ನುವುದು ಸರಿ ಇದೆ. ದಾವಾ ಅನುಸೂಚಿ ಎ ಸ್ವತ್ತು ಕುರಿತು ಡಿಕ್ರಿ ಮಾಡಿರುವುದರ ಕುರಿತು ಯಾವುದೇ ತಿದ್ದು ಪಡಿ ಕೇಳದೆ ಅಂತಿಮ ಡಿಕ್ರಿ ಸಲ್ಲಿಸಿ ದಾವಾ ಅನುಸೂಚಿ ಎ ಸ್ವತ್ತು ಕುರಿತು ಮುಂದುವರೆಸುತ್ತಿದ್ದೇನೆ ಎನ್ನುವುದು ಸರಿ ಇದೆ. ಸತ್ಯವನ್ನು ಮರೆಮಾಚಿ ಸುಳ್ಳು ದಾವೆ ಸಲ್ಲಿಸಿದ್ದು ದಾವೆಯಲ್ಲಿ ಕೇಳುತ್ತಿರುವ ಪರಿಹಾರಕ್ಕೆ ನಾನು ಅರ್ಹ ನಾಗಿಲ್ಲ ಎನ್ನುವುದು ಸರಿ ಅಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.